**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**ಸಿ.ಸಿ. ನಂಃ212/2022 ಡಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **05.08.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಫೀರ್ಯಾದಿದಾರರ ಪರ ಶ್ರೀ **ಎಚ್.ಆರ್.ಎಸ್** ವಕೀಲರಿಂದಃ

ಫೀರ್ಯಾದಿಯು ನನ್ನಿಂದ 2 ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ ಎಂದು ಪೊಲೀಸ ಠಾಣೆಯಲ್ಲಿ ತಿಳಿಸಿರುತ್ತೇನೆ ಎಂದು ನನ್ನ ಹಿಂದಿನ ಪಾಟೀ ಸವಾಲಿನಲ್ಲಿ ತಿಳಿಸಿದ್ದು, ಸದರಿ ವಿಚಾರದ ಬಾಬ್ತು ನಾನು ಪೊಲೀಸರಿಗೆ ಫೀರ್ಯಾದಿ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ.ಫೀರ್ಯಾಧಿದಾರರು ನನ್ನಿಂದ 2 ಚೆಕ್ಕುಗಳನ್ನು ಪಡೆದುಕೊಂಡಿರುವುದಿಲ್ಲ, ಆಕಾರಣದಿಂದ ನಾನು ಅವರ ವಿರುದ್ಧ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನಿಂದ ಹೇಳಿಕೆಯನ್ನು ಪಡೆದುಕೊಂಡ ಬಾಬ್ತು ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಪ್ರಕರಣ ಚಾಲ್ತಿಯಲ್ಲಿ ಇರುವ ಸಮಯದಲ್ಲಿ ನಾನು ಹಾಗೂ ನಿಂಗಣ್ಣರವರು ಒಟ್ಟಿಗೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆವು ಎಂದರೆ ಸರಿ. ಇಂದಿಗೂ ಸಹ ನಾನು ಹಾಗೂ ನಿಂಗಣ್ಣ ವಿಶ್ವಾಸದಿಂದ ಚೆನ್ನಾಗಿ ಇರುತ್ತೇವೆ ಎಂದರೆ ಸರಿ. ನಿಂಗಣ್ಣರವರು ಫೀರ್ಯಾದಿಯವರ ವಿರುದ್ಧ ದೂರು ನೀಡಿರುವ ಬಾಬ್ತು ಸದರಿ ದೂರಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಈ ಪ್ರಸ್ತುತ ಪ್ರಕರಣದ ವ್ಯವಹಾರಕ್ಕೂ, ನಿಂಗಣ್ಣ ಮತ್ತು ಬಸಮ್ಮಣಿರವರು ಫೀರ್ಯಾದಿಯೊಂದಿಗೆ ಮಾಡಿರುವ ವ್ಯವಹಾರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಎಲ್ಲಾ ವ್ಯವಹಾರಗಳು ಪ್ರತ್ಯೇಕವಾಗಿದ್ದು, ನಾನು, ನಿಂಗಣ್ಣ ಮತ್ತು ಬಸಮ್ಮಣಿರವರು ವಿಶ್ವಾಸದಿಂದ ಇದ್ದು, ಫೀರ್ಯಾದಿಯವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎದರೆ ಸರಿಯಲ್ಲ. ನಾನು ಫೀರ್ಯಾದಿಯಿಂದ ಪಡೆದುಕೊಂಡ ರೂ.5 ಲಕ್ಷ ಹಣವನ್ನು ಮರುಪಾವತಿಸಲು ಬಾಧ್ಯಸ್ಥರಾಗಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**